

ಸೋಯಾ ಬೆಳೆಗಾರರು ತನ್ನ ಮೇಲೆ ವಿಷ ಸಿಂಪಡಿಸಿದ್ದಾರೆಂಬುದು ಪೆರುಗ್ವೆಯ ಮೂಲ ನಿವಾಸಿ ಮಹಿಳೆಯ ಆರೋಪ. ಅದಕ್ಕೇ ತನ್ನ ಜನಾಂಗದವರನ್ನೆಲ್ಲ ಕಟ್ಟಿಕೊಂಡು ಬಂದು ಪೆರುಗ್ವೆ ರಾಜಧಾನಿಯಲ್ಲಿ ಪ್ರತಿಭಟನೆ ನಡೆಸಿದಳು. ಆದರೆ ಆಕೆ ಗಿಳಿಮರಿಗೆ ಗುಟುಕು ಉಣಿಸುವುದನ್ನು ನೋಡಿ. ಆಹಾರವನ್ನು ಚೆನ್ನಾಗಿ ಅಗಿದು, ರುಚಿ ನೋಡಿ, ವಿಷವಿಲ್ಲವೆಂಬುದನ್ನು ಖಾತ್ರಿ ಮಾಡಿಕೊಂಡು.. ಸೋಯಾದವರಿಗಿಲ್ಲದ ವರ್ರಿ ಆಕೆಗೆ!

ಸಿಂಗಪುರದಲ್ಲಿ ನಡೆದ ಶೃಂಗ ಸಮ್ಮೇಳನಕ್ಕೆ ಮಲೇಷ್ಯಾ ಪ್ರಧಾನಿ ನಜೀಬ್ ಸೈಕಲ್ ರಿಕ್ಷಾದಲ್ಲಿ ಆಗಮಿಸಿದರು. ಅಷ್ಟು ಪರಿಸರ ಕಾಳಜಿ ಅವರಿಗೆ. ಇಂಧನ ಉಳಿತಾಯ, ಪರಿಸರ ರಕ್ಷಣೆ ಎಂದೆಲ್ಲ ಬಡಾಯಿ ಕೊಚ್ಚುವ ನಮ್ಮ ರಾಜಕಾರಣಿಗಳು, ಹಿಂದೆ-ಮುಂದೆ ಎಸ್ಕಾರ್ಟ್‌ಗಳನ್ನಾದರೂ ಬಿಡುತ್ತಾರಾ ಕೇಳಿ!



ಅಂಟಾರ್ಟಿಕಾಗೆ ಶೋಧಕ್ಕೆಂದು ಹೊರಡುವವರ ಕಾಲ ಮುಗಿಯಿತು. ಈಗ ವಿಸ್ಕಿ ಬಾಟಲ್ ಶೋಧಿಸಲು ಹೊರಡುವವರು ಸಜ್ಜಾಗಿದ್ದಾರೆ. ಅಲ್ಲಿ ನೂರು ವರ್ಷಗಳ ಹಿಂದೆ ಮುಳುಗಿದ ಹಡಗಿನಲ್ಲಿದ್ದ ವಿಸ್ಕಿ ಹುಡುಕಿ ತೆಗೆಯಲು ನ್ಯೂಜಿಲೆಂಡ್ ವೈನ್ ಕಂಪೆನಿಯೊಂದು ಮಂಜುಗಡ್ಡೆ ಕೊರೆಯುತ್ತಿದೆ. ಬಾಟಲ್ ಸಿಕ್ಕಿದರೆ ಫ್ರಿಜ್‌ನ ವಿದ್ಯುತ್ ಖರ್ಚು ಉಳಿಯಿತೆಂದು ನಮ್ಮ ನಿಮ್ಮಂಥವರು ಲೆಕ್ಕ ಹಾಕಿದರೆ ಕಂಪೆನಿ ಓಲ್ಡ್ ವೈನ್ ಇನ್ ಓಲ್ಡ್ ಬಾಟಲ್‌ಗೆಷ್ಟು ಬೆಲೆ ಎಂದು ಲೆಕ್ಕಾಚಾರ ಹಾಕುತ್ತಿದೆ.

ಜಪಾನಿನಲ್ಲಿ ಚಾಕೊಲೇಟ್ ಸ್ನಾನಗಳು ಅಣಬೆಯಂತೆ ಹುಟ್ಟಿಕೊಂಡಿವೆ. ತಿನ್ನುವ, ಕುಡಿಯುವ ಚಾಕೊಲೇಟ್ ಈಗ ಸ್ನಾನಕ್ಕೆ ಬಳಕೆಯಾಗುತ್ತಿದೆ. ಸ್ನಾನದ ಮನೆಯ ಪಕ್ಕ ಇರುವ ಶೌಚಾಲಯಕ್ಕೂ ಈ ವ್ಯವಸ್ಥೆ ಬಂದರೆ..






ವಿಶ್ವದಲ್ಲೇ ಲಂಡನ್ ವಾಸ ಬಲು ದುಬಾರಿ. ವಿಚಿತ್ರವೆಂದರೆ ಅಲ್ಲಿಯೂ ಖಾಲಿ ಇರುವ ಕಟ್ಟಡಗಳನ್ನು ಅತಿಕ್ರಮಿಸಿಕೊಂಡು ಮಜ ಉಡಾಯಿಸುವ ಮಂದಿಗೆ ಕೊರತೆಯಿಲ್ಲ. ಅತ್ಯಂತ ದುಬಾರಿ ಕಟ್ಟಡಗಳಲ್ಲಿ ಒಂದಾದ ಓಡಿಯಾನ್ ಸಿನಿಮಾ ಮಂದಿರದ ಮೇಲಿನ ಅಂತಸ್ತಿನಲ್ಲಿ ಎಲ್ಲಾ ಕಡೆಯಿಂದ ಕಲಾವಿದರು ಪುಕ್ಕಟೆ ಬಂದು ಜಮಾಯಿಸುತ್ತಿದ್ದಾರೆ.

ಲಂಡನ್ನಿನ ಉದ್ಯಾನದ ಅಧಿಕಾರಿಗಳು ನಮ್ಮ ಭಾರತದ ಐಡಿಯಾವನ್ನು ಕದ್ದಿದ್ದಾರೆ. ಅಲ್ಲಿಯ ಉದ್ಯಾನವೊಂದರ ಅಧಿಕಾರಿಗಳು ತಮ್ಮ ಪುರುಷ ಕಾರ್ಮಿಕರಿಗೆ ಶೌಚಾಲಯದ ಬದಲು ಹುಲ್ಲಿನ ಮೇಲೆ ಮೂತ್ರ ವಿಸರ್ಜನೆ ಮಾಡುವಂತೆ ತಾಕೀತು ಮಾಡಿದ್ದಾರಂತೆ. ಆ ಹುಲ್ಲನ್ನು ಗೊಬ್ಬರ ಮಾಡುತ್ತಾರಂತೆ. ಮತ್ತೆ ಶೌಚಾಲಯಕ್ಕೆ ಬಳಸುವ ನೀರೂ ಉಳಿಯಿತು ಎಂಬುದು ಅಧಿಕಾರಿಗಳ ಅಂಬೋಣ. ಆದರೆ ಎಲ್ಲೆಂದರಲ್ಲಿ ವಿಸರ್ಜಿಸುವ ಹಕ್ಕು ಮಾತ್ರ ಭಾರತೀಯರಿಗೇ!

ಲಂಡನ್ನಿನ ಗಿಲ್ಬರ್ಟ್ ಕುಡಿಯಲಿಲ್ಲ, ಕುಣಿದು ಕುಪ್ಪಳಿಸಲಿಲ್ಲ. ಆದರೂ ಐದು ಕೋಟಿ ರೂಪಾಯಿ ಮೌಲ್ಯದ ಕಾರನ್ನು ಸೀದಾ ಕೆರೆಯೊಳಗೆ ಚಲಾಯಿಸಿದ. ಕೇಳಿದರೆ, ಕೆಲವೇ ಡಾಲರ್ ಬೆಲೆಯ ಮೊಬೈಲ್ ಸೆಟ್ ರಸ್ತೆ ಮೇಲೆ ಬಿದ್ದುಹೋಯ್ತು ಎಂದನಂತೆ. ಪುಡಿಗಾಸಿನ ಆಸೆಗೆ ಇಡಿಗಂಟು ಹೋಯ್ತು.



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65